ಶ್ರೀ ಜಿ. ಪುಟ್ಟಸ್ವಾಮಿಗೌಡ : ಸರ್ಕಾರಿ ಆಜ್ಞೆಯನ್ನು ಪಾಲನೆ ಮಾಡದೇ ಇದ್ದರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳತಕ್ಕದ್ದಕ್ಕೆ ಕಾನೂನಿನಲ್ಲಿ ಅವಕಾಶ ಇದೆ.

ಅಧ್ಯಕ್ಷರು : ನಾಲ್ಕು ಜನರ ಮೇಲೆ ಕ್ರಮ ತೆಗೆದುಕೊಳ್ಳಿ. ನೀವು ಏಕೆ ತೆಗೆದುಕೊಳ್ಳುವುದಿಲ್ಲ. If they want to be in Govenment service, they should be prepared to go to the places where they are posted.

SRI R.V. DESHPANDE : Everybody wants to live in cities, like Bangalore, Mysore, Belgaum, Hubli-Dharwad etc., Government has to take firm decision on this.

MR. SPEAKER : Hon. Minister can take a firm decision. You may become unpopular in the eyes of the Doctors, but you will become popular in the eyes of the general public.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಈ ವಿಷಯದಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದರಲ್ಲಿ ಅನಧಿಕೃತವಾಗಿ ಗೈರು ಹಾಜರು ಆಗತಕ್ಕ ಡಾಕ್ಟರುಗಳ ಸಂಖ್ಯೆ ಬಹಳಷ್ಟು ಇದೆ. 8.10 ವರ್ಷಗಳಿಂದ ಕೂಡ ಡ್ಯೂಟಿಗೆ ಬರದೇ ಇರತಕ್ಕ ಡಾಕ್ಟರುಗಳು ಇದ್ದಾರೆ. ಮೊನ್ನೆ ಸಚಿವಸಂಪುಟದ ಸಭೆಯಲ್ಲಿ ಕೂಡ ಪ್ರಸ್ತಾಪವಾಯಿತು. ಸುಮಾರು ಐದು ಜನರು

ಶ್ರೀ ಗೋಪೀನಾಥ ಆರ್. ಸಾಂಡ್ರಾ : ಈ ತರಹ ಉತ್ತರ ಹೇಳುತ್ತಲೇ ಇದ್ದಾರೆ.

(ಗೊಂದಲ)

ಶ್ರೀಮತಿ ಮೋಟಮ್ಮ : ಯಾವುದೇ ಡಾಕ್ಟರ್ ರಿಪೋರ್ಟ್ ಮಾಡದೇ ಇರುವ ಬಗ್ಗೆ ಏನೂ ಕ್ರಮ ಆಗಿಲ್ಲ. ಮಲೆನಾಡಿನಲ್ಲಿ ಎಲ್ಲಾ ಭಾಗಗಳಲ್ಲಿ ಈ ತರಹ ಡಾಕ್ಟರುಗಳ ಕೊರತೆ ಇದೆ.

(ಗೊಂದಲ)

ಅಧ್ಯಕ್ಷರು : ಈಗ ಸದನದ ಎಲ್ಲಾ ಭಾಗಗಳಿಂದಲೂ ಕೂಡ ನಿಮಗೆ ಸಪೋರ್ಟ್ ಇದೆ. ಆದ್ದರಿಂದ ನೀವು ಈ ವೈದ್ಯರುಗಳ ಬಗ್ಗೆ ಮರ್ಸಿಲೆಸ್ ಆಗಿ, ಕಟುಕನಂತೆ ವರ್ತಿಸಿ.

ಶ್ರೀಮತಿ ಮೋಟಮ್ಮ : ಡ್ಯೂಟಿಗೆ ಹಾಜರಾಗದವರ ಪೋಸ್ಟಿಂಗ್ಸ್‌ನ್ನು ಕ್ಯಾನ್ಸಲ್ ಮಾಡಲಿ. ಅವರ ಪ್ರೊಬೇಷನರಿ ಪೀರಿಯಡ್ ಅನ್ನು ಡಿಕ್ಲೇರ್ ಮಾಡುವುದು ಬೇಡ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಸಾರ್ವಜನಿಕರ ವಂತಿಕೆ

2403 - ಶ್ರೀ ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊರಟಗೆರೆ ತಾಲ್ಲೂಕು ತುಂಬಾಡಿ ಮತ್ತು ತೀತ ಗ್ರಾಮದಲ್ಲಿ ಹೊಸದಾಗಿ ಆಸ್ಪತ್ರೆಗಳನ್ನು ಕಟ್ಟಲು ಜನಗಳು ಸರ್ಕಾರಕ್ಕೆ ವಂತಿಕೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಗ್ರಾಮಗಳಿಗೆ ಆಸ್ಪತ್ರೆಗಳ ಮಂಜೂರು ಮಾಡಲು ಸರ್ಕಾರ ಕೈಗೊಂಡು ಕ್ರಮಗಳೇನು ?

ಇ) ಈ ಆಸ್ಪತ್ರೆಗಳನ್ನು ಕಟ್ಟಲು ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಪ್ರಾಥಮಿಕ ಆರೋಗ್ಯ ಘಟಕ ಮಂಜೂರಾಗಲು ಇದ್ದ ನಿಬಂಧನೆ ಪ್ರಕಾರ ತೀತಾ ಗ್ರಾಮಸ್ಥರು 25,000 ರೂ. ವಂತಿಕೆ ಹಣ ಕೊರಟಗೆರೆ ಅಂಚೆ ಕಛೇರಿಯಲ್ಲಿ ಠೇವಣಿ ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ತುಂಬಾಡಿ ಗ್ರಾಮದ ಬಗ್ಗೆ ಯಾವ ಮಾಹಿತಿಯೂ ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮಂಜೂರು ಮಾಡುವ ಯೋಜನೆಯನ್ನು 1-4-87ರಿಂದ ಕೈಬಿಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಹುಬ್ಬಳ್ಳಿ, ಮಹದೇವ್ ಜವಳಿ ಗಿರಣಿಗೆ ಆರ್ಥಿಕ ನೆರವು.

2424 - ಶ್ರೀ ಎ.ಎಂ. ಹಿಂಡುಸಗೇರಿ (ಹುಬ್ಬಳ್ಳಿ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾದೇವ ಜವಳಿ ಗಿರಣಿಯ ಹುಬ್ಬಳ್ಳಿಯ ದುಡಿಮೆ ಬಂಡವಾಳ ಕೊರತೆಯಿಂದ ಮುಚ್ಚುವ ಸ್ಥಿತಿಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆಗಿದ್ದಲ್ಲಿ, ಸರ್ಕಾರವು ಸದರಿ ಮಿಲ್ಲಿಗೆ ಆರ್ಥಿಕ ಸಹಾಯವನ್ನು ಒದಗಿಸಲು ಸಿದ್ದವಿದೆಯೇ?

ಶ್ರೀಮತಿ ಮನೋರಮಾ ಮದ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಹೌದು.

ಆ) ಮಹಾದೇವ ಜವಳಿ ಗಿರಣಿಯ ಪುನರ್ ಸಜ್ಜೀಕರಣ ಮತ್ತು ಇತರೆ ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವುದು

2496 - ಶ್ರೀ ಮಂಜುನಾಥ ಸಿ. ಕೂನ್ನೂರ (ಶಿಗ್ಗಾವಿ) : ಮಾನ್ಯ ಕಾರ್ಮಿಕ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ?

ಅ) ರಾಜ್ಯದಲ್ಲಿ 1989 ರಿಂದ ಈವರೆಗೆ ಇರುವ ನಿರುದ್ಯೋಗಿಗಳ ಸಂಖ್ಯೆ ಎಷ್ಟು?

ಆ) ಉದ್ಯೋಗಾವಕಾಶ ಸಿಗದಿದ್ದವರಿಗೆ ಉದ್ಯೋಗವನ್ನು ಕಲ್ಪಿಸಿಕೊಡಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಇ) ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾಯಿಸಿದ ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಕರೆಯಲು ಯಾವ ಆಧಾರದ ಮೇಲೆ ಕಳಿಸಲಾಗುವುದು.

ಈ) ಉದ್ಯೋಗ ವಿನಿಮಯ ಕಛೇರಿಯಲ್ಲಿ ವಿವಿಧ ಉದ್ಯೋಗಕ್ಕಾಗಿ 10 ವರ್ಷಗಳ ಮೇಲ್ಪಟ್ಟ ಹೆಸರು ನೋಂದಾಯಿಸಿದವರ ಸಂಖ್ಯೆ ಎಷ್ಟು?